

ಸ್ಟೇಡಿಯಮ್

490ರಲ್ಲಿ ನಡೆದ ಮ್ಯಾರಥಾನ್ ಯುದ್ಧದಲ್ಲಿ ಪರ್ಷಿಯನ್ನರ ವಿರುದ್ಧ ವಿಜಯ ಸಾಧಿಸಿದ ಗ್ರೀಕರ ಸ್ಮರಣಾರ್ಥವಾಗಿ ಇಂದಿಗೂ ತಲೆಯೆತ್ತಿ ನಿಂತಿದೆ. ಇಂತಹ ಟ್ರೆಶರಿಗಳು ಇನ್ನೂ ಕೆಲವಷ್ಟಿದ್ದರೂ ಕೆಲವು ಚಿಕ್ಕ ಕಲ್ಲುಗಳನ್ನು ಹೊರತುಪಡಿಸಿ ಗುರುತಿಸುವಂತಹ ಕಟ್ಟಡಗಳೇನೂ ಉಳಿದಿಲ್ಲ. ಮುಂದೆ ಸ್ಟೊವ್ ಆಫ್ ಅಥೆನಿಯನ್ ಎಂದು ಕರೆಯಲಾಗುವ ಇಕ್ಕೆಲಗಳಲ್ಲೂ ಎತ್ತರೆತ್ತರದ ಕಂಬಗಳ ಸಾಲುಗಳಿದ್ದ ಸಭಾಂಗಣದ ಅವಶೇಷಗಳನ್ನು ಕಾಣಬಹುದು. ಯುದ್ಧದಲ್ಲಿ ಗೆದ್ದ ಪಾರಿತೋಷಕಗಳನ್ನು ಇಡಲು ಇದನ್ನು ಬಳಸಲಾಗುತ್ತಿತ್ತಂತೆ.

ಈ ಜಾಗದ ಮುಖ್ಯ ಆಕರ್ಷಣೆ ಎಂದರೆ ಅಪೊಲೊಗಾಗಿ ಕಟ್ಟಲಾದ ದೇವಸ್ಥಾನ. ಅದೇ ಜಾಗದಲ್ಲಿ ಮೊದಲಿದ್ದ ಕಟ್ಟಡ ಶಿಥಿಲಗೊಂಡಾಗ ಅದನ್ನು ಕೆಡವಿ ಈಗಿರುವ ಕಟ್ಟಡವನ್ನು ಕ್ರಿಸ್ತ ಪೂರ್ವ ನಾಲ್ಕನೇ ಶತಮಾನದಲ್ಲಿ ಕಟ್ಟಲಾಯಿತು. ಭವಿಷ್ಯವಾಣಿಯನ್ನು ನುಡಿಯುತ್ತಿದ್ದ ಒರಾಕಲ್‌ಗಳ ಸ್ಥಾನವಾಗಿತ್ತು ಇದು. ಒರಾಕಲ್‌ನನ್ನು ಭೇಟಿಯಾಗಿ ತಮ್ಮ ಭವಿಷ್ಯ ತಿಳಿದುಕೊಳ್ಳಲು ದೂರದೂರುಗಳಿಂದ ರಾಜ ಮಹಾರಾಜರು ಬರುತ್ತಿದ್ದರು. ಬಂದೆರಗುವ ಯುದ್ಧಗಳ ಪರಿಣಾಮವೇನಾಗುತ್ತದೆ? ಶತ್ರುವನ್ನು ಸದೆಬಡಿಯುವುದು ಹೇಗೆ? ದಂಡೆತ್ತಿ ಹೋಗಲು ಸೂಕ್ತ ಸಮಯ ಯಾವುದು? ಎಂಬಂತಹ ಪ್ರಶ್ನೆಗಳಿಗೆ ಒರಾಕಲ್‌ನಿಂದ ಉತ್ತರ ಸಿಗುತ್ತಿತ್ತು. ಗ್ರೀಕ್ ದೇಶದಾದ್ಯಂತ ಡೆಲ್ಫಿ ಎನ್ನುವ ಪುಟ್ಟ ಊರು ಪ್ರಸಿದ್ಧಿ ಪಡೆದುದು ಈ ಕಾರಣದಿಂದಲೇ.

ಅಪೊಲೊ ದೇವಾಲಯದಿಂದ ಮೆಟ್ಟಿಲುಗಳನ್ನೇರಿ ಮುಂದೆ ನಡೆದರೆ ಸುಂದರವಾದೊಂದು ಆಂಫಿಥಿಯೇಟರ್ ಎದುರಾಗುತ್ತದೆ. ಇದರಲ್ಲಿ ಮೂವತ್ತೈದು ಮೆಟ್ಟಿಲುಗಳ ಸಾಲುಗಳಿದ್ದು ಸುಮಾರು 5000 ಜನರು ಒಮ್ಮೆಲೇ ಕುಳಿತುಕೊಳ್ಳುವಷ್ಟು ಜಾಗವಿದೆ. ಹಿಂದೆ ನಾಟಕಗಳು, ಕವನ ವಾಚನ, ಸಂಗೀತ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿತ್ತಂತೆ. ಇಲ್ಲಿ ಕುಳಿತವರಿಗೆ ಎದುರಿಗಿರುವ ಬೆಟ್ಟಗುಡ್ಡಗಳ, ಕಣಿವೆಗಳ ಜೊತೆಗೆ ಡೆಲ್ಫಿ ಪಟ್ಟಣದ ಕೆಳಸ್ತರಗಳ ಅಪೂರ್ವ ದೃಶ್ಯ ಕಾಣಸಿಗುತ್ತದೆ.

ಒಲಿಂಪಿಯಾದಲ್ಲಿ ಒಲಂಪಿಕ್ ಗೇಮ್ಸ್ ಇದ್ದ ಹಾಗೆ ಡೆಲ್ಫಿಯಲ್ಲಿ ‘ಪಿಥಿಯನ್ ಗೇಮ್ಸ್’ ಎಂದು ಕರೆಯಲಾಗುವ ಆಟಗಳ ಸ್ಪರ್ಧೆ ನಡೆಯುತ್ತಿತ್ತು. ಪ್ರತಿ ನಾಲ್ಕು ವರ್ಷಕ್ಕೊಮ್ಮೆ ನಡೆಯುತ್ತಿದ್ದ ಈ ಆಟಗಳಲ್ಲಿ ಎಲ್ಲ ಗ್ರೀಕ್ ಪ್ರಜೆಗಳಿಗೆ ಮುಕ್ತ ಅವಕಾಶವಿತ್ತು. ಗೆದ್ದವರಿಗೆ ಎಲೆಗಳಿಂದ ಮಾಡಿದ ಕಿರೀಟವೇ ಬಹುಮಾನ. ಥಿಯೇಟರ್‌ನಿಂದ ಮೆಟ್ಟಿಲುಗಳನ್ನೇರಿ ಮುನ್ನಡೆದರೆ ಪಿಥಿಯನ್ ಆಟೋಟ ಸ್ಪರ್ಧೆಗಳು ನಡೆಯುತ್ತಿದ್ದ ಅಂಡಾಕಾರದ ಕ್ರೀಡಾಂಗಣ ಕಂಡುಬರುತ್ತದೆ. 178 ಮೀಟರ್ ಉದ್ದವಿದ್ದ ಈ ಅಂಗಣದಲ್ಲಿ ಸುಮಾರು 6000 ಜನರು ಒಟ್ಟಿಗೆ ಕುಳಿತು ವೀಕ್ಷಿಸುವಂತಹ ಸೌಲಭ್ಯವಿತ್ತು. ಇದು ಸಾವಿರಾರು ವರ್ಷಗಳೇ ಕಳೆದರೂ ಡೆಲ್ಫಿಯ ಗತವೈಭವಕ್ಕೆ ಸಾಕ್ಷಿ ಎನ್ನುವಂತೆ ಇನ್ನೂ ಉತ್ತಮ ಸ್ಥಿತಿಯಲ್ಲೇ ಇದೆ.

ಮುಖ್ಯ ಉತ್ಖನನ ಪ್ರದೇಶದಿಂದ ಹೊರಬಂದು ಒಂದು ಕಿ.ಮೀ.ಗಳಷ್ಟು ನಡೆದರೆ ಇನ್ನೊಂದಷ್ಟು ಅವಶೇಷಗಳು ಕಾಣಸಿಗುತ್ತವೆ. ಇಲ್ಲಿ ನೋಡಲೇಬೇಕಾದ ಇನ್ನೊಂದು ಜಾಗವೆಂದರೆ ‘ಟೆಂಪಲ್ ಆಫ್ ಅಥೇನಾ’ದ ಸಮೀಪವಿರುವ ಥೋಲೋಸ್ ಎಂಬ ವರ್ತುಲಾಕೃತಿಯ ಕಟ್ಟಡ. ಎತ್ತರದ ಡೋರಿಕ್ ಮಾದರಿಯ ಇಪ್ಪತ್ತು ಕಂಬಗಳು, ಗುಮ್ಮಟದಂತಹ ಛಾವಣಿ, ಛಾವಣಿಯ ಸುತ್ತಲೂ ವಿವಿಧ ಭಂಗಿಗಳಲ್ಲಿ ನಿಂತ ಪ್ರತಿಮೆಗಳಿದ್ದವೆಂದು ಹೇಳಲಾಗುತ್ತದೆ. ಆದರೆ ಇದನ್ನು ಯಾಕಾಗಿ ಕಟ್ಟಲಾಯಿತೆಂಬುದಕ್ಕೆ ಸರಿಯಾದ ಉತ್ತರವಿನ್ನೂ ದೊರೆತಿಲ್ಲ. ಹತ್ತಿರದಲ್ಲೇ ಕ್ಯಾಸ್ಟಲಿಯಾನ್ ಎಂಬೊಂದು ನೀರಿನ ಚಿಲುಮೆ ಇದ್ದು ಅಪೊಲೊ ದೇವಾಲಯಕ್ಕೆ ಬರುವ ಜನರು ಮೊದಲು ಇಲ್ಲಿ ಕೈಕಾಲುಗಳನ್ನು ತೊಳೆದುಕೊಂಡು ಬರುವ ರೂಢಿಯಿತ್ತು. ಸ್ವತಃ ಒರಾಕಲ್ ಸಹ ಭವಿಷ್ಯ ನುಡಿಯುವ ಮೊದಲು, ಇಲ್ಲಿಗೆ ಬಂದು ಶುಚಿಗೊಂಡು ನಂತರವೇ ಜನರ ಅಹವಾಲುಗಳನ್ನು ಆಲಿಸುತ್ತಿದ್ದುದು.

ಉತ್ಖನನ ಸಂದರ್ಭದಲ್ಲಿ ಸಿಕ್ಕಂತಹ ವಿಶಿಷ್ಟ ವಸ್ತುಗಳನ್ನು ಪ್ರದರ್ಶಿಸಲು ಅಲ್ಲೊಂದು ವಸ್ತುಸಂಗ್ರಹಾಲಯವೂ ಇದೆ. ಕ್ರಿಸ್ತ ಪೂರ್ವದಲ್ಲಿ ಪ್ರಸಿದ್ಧಿಯ ತುತ್ತ ತುದಿಯಲ್ಲಿದ್ದ ಈ ಡೆಲ್ಫಿ ಎಂಬ ಪುಟ್ಟ ಪಟ್ಟಣ, ನಂತರ ರೋಮನ್ನರ ಕೈಸೇರಿತು. ಅಷ್ಟರಲ್ಲಾಗಲೇ ರೋಮ್ ಸಾಮ್ರಾಜ್ಯದಲ್ಲಿ ಕ್ರಿಶ್ಚಿಯಾನಿಟಿ ಹರಡಿತ್ತು. ಮುಂದಿನ ದೊರೆಗಳು ಕ್ರಿಶ್ಚಿಯನ್ನು ಧರ್ಮವನ್ನು ಬಲವಂತವಾಗಿ ಗ್ರೀಕರ ಮೇಲೆ ಹೇರತೊಡಗಿದರು.

ಡೆಲ್ಫಿಯಲ್ಲಿ ನಡೆಯುತ್ತಿದ್ದ ಪೂಜೆಗಳನ್ನು ನಿಲ್ಲಿಸುವಂತೆ ಆಜ್ಞೆ ನೀಡಲಾಯಿತು. ಹೀಗೆ ಜನಮಾನಸದಿಂದ ಮರೆಯಾದ ಈ ಊರು ಕಾಲಾನಂತರದಲ್ಲಿ ಮಣ್ಣಿನಾಳದಲ್ಲಿ ಹುದುಗಿತು. ಅದರ ಮೇಲೆ ಹೊಸ ಪಟ್ಟಣವೊಂದು ಬೆಳೆಯಿತು.

ಸುಮಾರು 19ನೇ ಶತಮಾನದ ಹೊತ್ತಿಗೆ ಜರ್ಮನಿ, ಫ್ರಾನ್ಸ್ ಮುಂತಾದ ದೇಶಗಳ ಪುರಾತತ್ವ ಇಲಾಖೆಯ ನೆರವಿನಿಂದ ಉತ್ಖನನ ನಡೆಸಲಾಯಿತು. ಚರಿತ್ರೆಯ ಪುಟಗಳಲ್ಲೆಲ್ಲೋ ಕಳೆದುಹೋಗಿದ್ದ ಡೆಲ್ಫಿ ಮತ್ತೆ ಬೆಳಕಿಗೆ ಬಂದಿತು. ಈಗ ಇದು ಯುನೆಸ್ಕೊದ ವಿಶ್ವ ಪರಂಪರೆಯ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ವರ್ಷವಿಡೀ ಲಕ್ಷಗಟ್ಟಲೆ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ.

ಪ್ರತಿಕ್ರಿಯಿಸಿ: feedbak@sudha.co.in